doc-400
T.P-2

R No KRNN 12

29 - 11 - 1974

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

- For Influential Publicity -

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ. ಕುಪ್ಪಯ್ಯರಾವ್ ಸಂಪಾದಕರು: ಧರ್ಮಶ್ರೀ ಪುರಸ್ಕೃತ ಎಂ. ಎಸ್. ಕೃಷ್ಣರಾವ್ [3 ಕ,ಪ

ಅಸ್ತಿ ಘೋಷಣೆಗೆ ಕಾಂಗ್ರೆಸ್ ಅಧ್ಯಕ್ಷರ ಕರೆ

ಅಸ್ತಿ ಘೋಷಣೆ

ಬೆಂಗಳೂರು— ಮಂತ್ರಿಮಂಡಲದಲ್ಲಿರುವವರ, ಅವರ ಪತ್ನಿಯರ, ಗಂಡು ಮಕ್ಕಳ, ಅಣ್ಣ ಮಕ್ಕಳ, ಹತ್ತಿರ ಸಂಬಂಧೀಕರ ಆಸ್ತಿಯ ಘೋಷಣೆಯನ್ನು ಒಂದು ತಿಂಗಳೊಳಗೆ ಪಡೆಯುವಂತೆ ಮುಖ್ಯಮಂತ್ರಿಗಳಿಗೆ ಕೆಪಿಸಿಸಿ ಅಧ್ಯಕ್ಷ ಶ್ರೀ ಕೆ. ಹೆಚ್. ಪಾಟೀಲರು ತಿಳಿಸಿರುವರು – ಅದೇ ರೀತಿ ಕಾಂಗ್ರೆಸ್ ಶಾಸಕರಿಂದ ಪಡೆಯಲು ಡೆಪ್ಯೆ ಲೀಡರ್ ಶ್ರೀ ಸಿದ್ಧವೀರಪ್ಪನವರಿಗೆ ತಿಳಿಸಿರುವರು.

ಹರಿಯಾಣಾದಲ್ಲಿ ಬಳುವಳಿ

ಕುರುಕ್ಷೇತ್ರ – ಹರಿಯಾಣದಲ್ಲಿ ಜನತಾ ಚಳವಳಿಯನ್ನು ಶ್ರೀ ಜಯಪ್ರಕಾಶ ನಾರಾಯಣರು ಪ್ರಾರಂಭಿಸಿದರು – ಭೂತ್ರ ಸಂಘರ್ಷ ಸಮಿತಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ, ಮಹಾಭಾರತ ಯುದ್ಧ ನಡೆದ ಕುರುಕ್ಷೇತ್ರದಲ್ಲಿ ಚಳವಳಿ ಪ್ರಾರಂಭಿಸಲ್ಪಡುವುದು ಒಳ್ಳೇ ಶಕುನವೆಂದು ಹೇಳಿದರು.

ವಾರ್ತಾ ಇಲಾಖೆಯಲ್ಲಿ ಪರಿಣಾಮಕಾರಿ ವ್ಯವಸ್ಥೆ

ಬೆಂಗಳೂರು– ಸಣ್ಣ ಪತ್ರಿಕೆಗಳ ಕಲ್ಯಾಣ ಸಮಿತಿ ತನ್ಮನ್ನು ಅಭಿನಂದಿಸಲು ಏರ್ಪಡಿಸಿದ್ದ ಸಮಾರಂಭದಲ್ಲಿ ವಾರ್ತಾ ಸ್ಟೇಟ್ ಮಂತ್ರಿ ಶ್ರೀ ಗುಂಡೂರಾವ್‌ರವರು, ವಾರ್ತಾ ಇಲಾಖೆಯನ್ನು ಒಳ್ಳೇ ಸುಸ್ಥಿತಿಯಲ್ಲಿಡಲು ಹೆಚ್ಚಿನ ಕಾರ್ಯ ಕೈಗೊಳ್ಳಲಾಗುವುದೆಂದು ಹೇಳಿದರು

ವಿಸ್ಮಯ ವಿಷಯ

ಪಾಂಡಿಚೆರಿ— ಸಿನ್ನಾ ಸುಬ್ಬಾಯುವರ ಉದಾರ ದಾನದ ಛತ್ರದಲ್ಲಿ ಪ್ರತಿದಿನ 200 ಬಡಜನರಿಗೆ ಆಹಾರ ನೀಡಲಾಗುತ್ತಿದೆ – ಅವರ 101 ನೇ ಪುಣ್ಯದಿನ ನೋನ್ನೆ ನಡೆಯಿತು – ಆದರೆ ಅವರ ವಂಶೀಯರಿಗೆ ರೇಷ್ಮೆ ಅಕ್ಕಿ ಪಡೆಯಲೂ, ಮನೆಯಲ್ಲಿ ದೀಪ ಮತ್ತಿತರ ಪದಾರ್ಥಕ್ಕೂ ಸೌಕರ್ಯವಿಲ್ಲ.

★

ಲಾಯರುಗಳ ಚಳವಳಿಗೆ ಕರೆ

ನವದೆಹಲಿ– ಲಾಯರುಗಳ ಸಂಘರ್ಷ ಸಮಿತಿಲಿ ಮಾತನಾಡುತ್ತಾ, ಶ್ರೀ ಜಯಪ್ರಕಾಶನಾರಾಯಣರು– ಕಾನೂನು, ನಿಬಂಧನೆಗಳನ್ನು ಸಂಕ್ಷಿಪ್ತಗೊಳಿಸುವ ವಿರುದ್ಧ ಲಾಯರುಗಳ ಚಳವಳಿ ಹೂಡಬೇಕೆಂದು ತಿಳಿಸಿದರು.

★

ವಾಪಸ್ ಬರಲು ತಿರಸ್ಕಾರ

ನವದೆಹಲಿ– ವಿದೇಶ ವಿಚಾರ ಸಚಿವಾಲಯದ ಅಧೀನದಲ್ಲಿರುವ 38 ರಾಜಕಾರ ನೇತರ ಅಧಿಕಾರಿಗಳು ತಮ್ಮ ಅವಧಿನಂತರ ವಿದೇಶಗಳಿಂದ ಭಾರತಕ್ಕೆ ವಾಪಸ್ಸಾಗಲು ತಿರಸ್ಕರಿಸುವರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

●

ರೂಪಾಯಿ ನಾಣ್ಯ

ನವದೆಹಲಿ— ಸರಕಾರವು 1 ರೂ. ನೋಟು ಬದಲು ಲೋಹದ ನಾಣ್ಯ ಜಾರಿಗೆ ತರಲು ಪರ್ಯಾಲೋಚಿಸುತ್ತಿರುವದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ರೂ 20 ಲಕ್ಷ ವಶ

ಹೈದರಾಬಾದು— ಒಬ್ಬ ಪ್ರಮುಖ ಟೈರು ವ್ಯಾಪಾರಿಯಿಂದ ಲೆಕ್ಕ ಕೊಡದಿದ್ದ ರೂ 6 ಲಕ್ಷ ಹಣವೂ ಸೇರಿ ರೂ 20 ಲಕ್ಷ ಆಸ್ತಿಯನ್ನು ಆದಾಯತೆರಿಗೆ ಅಧಿಕಾರಿಗಳು ಹಿಡಿದರು.

ಭಾರಿ ಸಾಮೂಹಿಕ ಜನತಾ ಸೆರವಣಿಗೆ

ನವದೆಹಲಿ— ಮುಂದಿನ ಮಾರ್ಚ್ 6 ರಂದು ಭಾರಿ ಜನತಾ ಸೆರವಣಿಗೆಯು, ಕೇಂದ್ರದ ಜನತಾ ವಿರುದ್ಧ ಮನೋಭಾವ ಮತ್ತು ನೀತಿ ಬದಲಾವಣೆಗೆ ಒತ್ತಾಯ ಮಾಡಲು ಪಾರ್ಲಿಮೆಂಟಿಗೆ ಹೋಗಲು ಕಮ್ಯೂನಿಸ್ಟೇತರ ವಿರೋಧ ಪಕ್ಷಗಳು ವ್ಯವಸ್ಥೆ ಮಾಡಲಿವೆ.

★

ಉರ್ದು ವಿಶ್ವಕೋಶ

ನವದೆಹಲಿ— ಉರ್ದು ವಿಶ್ವಕೋಶವು 6 ವರ್ಷಗಳಲ್ಲಿ ಮುಗಿಯುವುದೆಂದೂ ಈ 9 ಲಕ್ಷ ಪ್ರಾಜೆಕ್ಟಿಗೆ ಇಲ್ಲೀವರೆಗೆ ರೂ. 3634000 ಮಂಜೂರಾಗಿದೆಯೆಂದೂ ಅಧಿಕೃತವಾಗಿ ತಿಳಿಸಲಾಗಿದೆ.

★

ಜೆ ಪಿ ಯರ ಕೊಲೆ ಪಿತೂರಿಯೆ

ನವದೆಹಲಿ– ಜಯಪ್ರಕಾಶರು ಮತ್ತು ಕೆಲವು ಎಂ. ಪಿ. ಗಳು ಮೋಟಾರಿನಲ್ಲಿ ಕುರುಕ್ಷೇತ್ರಕ್ಕೆ ಹೋಗುತ್ತಿದ್ದಾಗ ಅವರ ಮೇಲೆ ಹಲ್ಲೆ ನಡೆಸಲಾಯಿತೆಂಬ ವಿಷಯವಾಗಿ ಲೋಕಸಭೆಯಲ್ಲಿ ಗಲಾಟೆಯಾಗಿ, ವಿರೋಧ ಸದಸ್ಯರು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು – ಶ್ರೀ ರಾಜ್ ನಾರಾಯಣ್‌ರವರು ರಾಜ್ಯಸಭೆಯಲ್ಲಿ " ಜಯಪ್ರಕಾಶ ಕೊಲೆ ಪಿತೂರಿ ಇದೆ " ಎಂದು ಆಪಾದಿಸಿದರು – ಅದೇರೀತಿ ಲೋಕಸಭೆಯಲ್ಲಿ ಶ್ರೀ ಜನೇಶ್ವರ ಗುಪ್ತರು ಆಪಾದಿಸಿದರು.

★

ಅವರ ಕೇಳಿಕೆ ಹೀಗಿದೆ

ನವದೆಹಲಿ– ಬೀಹಾರಿನ ಹಲವು ಕಾಂಗ್ರೆಸ್ ಶಾಸಕರು ಇಲ್ಲಿ ಕೆಲವು ಪಾರ್ಟಿ ನಾಯಕರನ್ನು ಕಂಡು, ರಾಜ್ಯದ ಶಾಸನಸಭಾ ಕಾಂಗ್ರೆಸ್ ಪಾರ್ಟಿ ನಾಯಕತ್ವದಲ್ಲಿ ಬದಲಾವಣೆ ಅಥವಾ ಗಫೂರ್ ಮಂತ್ರಿಮಂಡಲ ವಿಸ್ತರಣೆಗೆ ಕೇಳಿಕೆ ಹಾಕಿರುವರು.

ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆ, ಮೈಸೂರು.

ನಂ ಎಸಿಎಂ/ಹೆಚ್ಸಿ/60/74-75 ತಾ|| 18-11-1974

ಅಬ್ಸ್ಟ್ರಾಕ್ಟ್ ಟೆಂಡರ್ ಪ್ರಕಟಣೆ

ವಿಷಯ : 4 ನೇ ಡಿಸೆಂಬರ್ 1974 ರ ಬುಧವಾರ ಬೆಳಗ್ಗೆ 9-30 ಗಂಟೆಗೆ ಈ ಕಾರ್ಖಾನೆಯಲ್ಲಿ, ಕೆಲಸಕ್ಕೆ ಬಾರದ ಮತ್ತು ಕಂಡೆಂ ಆದ ಕೆಲಸಕ್ಕೆ ಬಾರದ ಪದಾರ್ಥಗಳು ಮುಂತಾದುವುಗಳ ಹರಾಜು ಮಾರಾಟ.

ಈ ಮೂಲಕ ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಕಟಪಡಿಸುವುದೇನೆಂದರೆ ನಿಶ್ಚಯವಾದ ಕೆಲಸಕ್ಕೆ ಬಾರದ ಮತ್ತು ಕಂಡೆಂ ಆದ ಪದಾರ್ಥಗಳನ್ನು ಈ ಕಾರ್ಖಾನೆಯಲ್ಲಿ ಹರಾಜು ಮಾರಾಟದ ಮೂಲಕ 4 ನೇ ಡಿಸೆಂಬರ್ 1974 ರ ಬುಧವಾರ ಬೆಳಗ್ಗೆ 9-30 ಗಂಟೆಗೆ ವಿಲೆ ಮಾಡಲಾಗುತ್ತದೆ. ಹರಾಜಿನಲ್ಲಿ ಭಾಗವಹಿಸುವ ಮೊದಲು ಆಪೇಕ್ಷಿಸುವ ಬಿಡ್‌ದಾರರು ಟೆಂಡರ್ ಶೀವಣಿಗಾಗಿ ರೂ 100/– ಪಾವತಿ ಮಾಡಬೇಕು. ಹರಾಜಿಗೆ ಇಟ್ಟಿರುವ ಪದಾರ್ಥಗಳ ವಿವರಗಳು ಮತ್ತು ಹರಾಜಿನಲ್ಲಿ ಭಾಗವಹಿಸುವ ಕುರಿತು ಇತರ ಷರತ್ತುಗಳನ್ನು, ಈ ಕಾರ್ಖಾನೆಯ ಯಾವುದೇ ಕೆಲಸದ ದಿನದಲ್ಲಿ ಈ ಕಛೇರಿಯಿಂದ ಅಥವಾ ಕೋರಿಕೆಯ ಮೇಲೆ ತಿಳಿಯಬಹುದು. ಹರಾಜಿಗೆ ಇಟ್ಟಿರುವ ಪದಾರ್ಥಗಳನ್ನು ಕಾರ್ಖಾನೆಯಲ್ಲಿ ಪರೀಕ್ಷಿಸಬಹುದು.

ಸಹಿ/– ಜನರಲ್ ಮ್ಯಾನೇಜರ್,
ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆ,
ಮೈಸೂರು – 570003.

ಬೆಲೆ ಸೂಚ್ಯಾಂಕದಲ್ಲಿ ಏರಿಕೆ

ಬೆಂಗಳೂರು— ರಾಜ್ಯದಲ್ಲಿ ಆಯ್ಕೆ ಮಾಡಲಾದ ಕೇಂದ್ರಗಳಲ್ಲಿ ಮಂಗಳೂರನ್ನು ಬಿಟ್ಟು ಉಳಿದ ಎಲ್ಲಾ ಕೇಂದ್ರಗಳಲ್ಲಿ ಕಳೆದ ಸೆಪ್ಟಂಬರು ತಿಂಗಳಲ್ಲಿ ಬಳಕೆದಾರರ ವಸ್ತುಗಳ ಬೆಲೆ ಸೂಚ್ಯಾಂಕದಲ್ಲಿ ಏರಿಕೆಯಾಗಿರುವುದು ಕಂಡುಬಂದಿದೆ ; ಆದರೆ ಮಂಗಳೂರಿನಲ್ಲಿ ಅದು ಇಳಿಮುಖವಾಗಿತ್ತು.

ಪೌರಸಭಾ ಚುನಾವಣೆ

ಬೆಂಗಳೂರು— ತುಮಕೂರು ಪೌರಸಭಾ ಚುನಾವಣೆಯನ್ನು ಫೆಬ್ರವರಿ 28 ರಂದು ನಡೆಸುವುದಾಗಿ ಹೈಕೋರ್ಟಿಗೆ ಸರಕಾರವು ಲಿಖಿತ ಹೊಣೆಗಾರಿಕೆ ಕೊಟ್ಟಿತು.

12 ವರ್ಷಗಳ ವಿದ್ಯಾಭ್ಯಾಸ

ನವದೆಹಲಿ— 1975 ನೆ 1 ರಿಂದ ದೇಶದಲ್ಲಿ 12 ವರ್ಷಗಳ ವಿದ್ಯಾಭ್ಯಾಸ ಗಳೆಂದು ಪ್ರೌಢ ವಿದ್ಯಾಭ್ಯಾಸ ಕೇಂದ್ರ ಮಂಡಲಿ ನಿರ್ಧರಿಸಿದೆ.

ದಿವ್ಯವಾಣಿ

ಎಲ್ಲವೂ ಹಾಳಾದರೂ ಭವಿಷ್ಯ ಮಾತ್ರ ಮಿಕ್ಕಿರುತ್ತದೆ — ಬೋವಿ

ಸುಖವು ಏಕಮಾತ್ರ ಒಳ್ಳೆಯದು. ಬುದ್ಧಿಶಕ್ತಿಯು ಏಕಮಾತ್ರ ಪಂಥ, ನ್ಯಾಯವು ಏಕಮಾತ್ರ ಪೂಜೆ, ಮಾನವೀಯತೆಯು ಏಕಮಾತ್ರ ಧರ್ಮ, ಪ್ರೇಮವು ಏಕ ಮಾತ್ರ ಅರ್ಚಕ. — ಆರ್. ಇಂಗರ್‌ಸಾಲ್

ವುಡ್‌ಲಾಂಡ್ಸ್ 29 11 74 ರಿಂದ

ಅಮೋಘ 4 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ 3 ಪ್ರದರ್ಶನಗಳು

ಅಪೆರಾ 29 11 74 ರಿಂದ

ಪಾತಾಳ ಭೈರವಿ

ಎನ್ ಟಿ ರಾಮರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ
ಅಮೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶ್ಶೇಧವಾಗಲಿ



Quality Printing Neat Binding

Lakshminarasimha Press

Sivarampet, Mysore 1

Protect the Cow

Help The Gorakshana

— Humanitarian Propoganda Monthly—

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore